

# ಸುದ್ದಿಯಲ್ಲಿ ಸುಶಾಂತ್

ಕೆಲವರಿರುತ್ತಾರೆ ಕೈತುಂಬ ಕೆಲಸ ಇರುತ್ತದೆ, ಆದರೆ ಆರಕ್ಕೇರುವುದಿಲ್ಲ, ಮೂರಕ್ಕಿಳಿಯುವುದಿಲ್ಲ. ಸುಶಾಂತ್ ಸಿಂಗ್ ರಜಪೂತ್ ಬಾಲಿವುಡ್‌ನಲ್ಲಿ ಈ ಸಾಲಿಗೆ ಸೇರಿದ ತಾರೆ. ವಯಸ್ಸು 32 ದಾಟಿದರೂ ಚಾಕೊಲೇಟ್ ಹೀರೊ ತರಹವೇ ಕಾಣುತ್ತಿರುವ ಸುಶಾಂತ್, ಈಗ ಬಾಲಿವುಡ್‌ನಲ್ಲಿ ಬಿಡುವಿಲ್ಲದ ನಟ. 'ಎಲ್ಲಿದ್ದಾನೆ ಸುಶಾಂತ್' ಎಂದು ಎಲ್ಲರೂ ಕೇಳುತ್ತಿರುವಂತೆಯೇ ದಿಢೀರ್ ಎಂದು ಮಿಂಚುವುದು ಈ ನಟನ ವೈಶಿಷ್ಟ್ಯ.

ಬಾಲಿವುಡ್‌ನ ಸೂಪರ್ ಸ್ಟಾರ್‌ಗಳಲ್ಲಿ ಒಬ್ಬನಾದ ಸೈಫ್ ಅಲಿ ಖಾನ್ ಮಗಳಾದ ಸಾರಾ ಅಲಿ ಖಾನ್ ಜೊತೆಗೆ ನಾಯಕನಾಗಿ ಈತ ನಟಿಸಿರುವ 'ಕೇದಾರನಾಥ್' ಚಿತ್ರ ಸಾಕಷ್ಟು ಸುದ್ದಿ ಮಾಡುತ್ತಿದೆ. ಇನ್ನೊಂದೆಡೆ ಜಾಕ್ವೆಲಿನ್ ಫರ್ನಾಂಡಿಸ್ ಜತೆ ನಟಿಸಿರುವ 'ಡ್ರೈವ್' ಎನ್ನುವ ಚಿತ್ರವೂ ರೆಡಿ ಆಗಿದೆ. 'ಕಿಝಿ ಔರ್ ಮನ್ನಿ' ಶೀಘ್ರ ತೆರೆಗೆ ಬರಲಿದೆ. ಈ ಮಧ್ಯೆ 'ಕಿಝಿ ಔರ್ ಮುನ್ನಿ' ಚಿತ್ರದ ಹೀರೊಯಿನ್ ಸಂಜನಾ, 'ಸುಶಾಂತ್ ನನ್ನ ಜತೆಗೆ ಅನುಚಿತವಾಗಿ ನಡೆದುಕೊಂಡಿದ್ದಾನೆ' ಎಂದು ಆರೋಪಿಸಿದ್ದು ದೊಡ್ಡ ಸುದ್ದಿಯಾಗಿದೆ. 'ಮೀಟೂ' ಕಾಲದ ಪತ್ರಕರ್ತರು ಸಿಕ್ಕಿದಲ್ಲೆಲ್ಲ ಈ ಬಗ್ಗೆ ಸ್ಪಷ್ಟೀಕರಣ ಕೊಟ್ಟು ಸುಶಾಂತ್ ಕೂಡಾ ಸುಸ್ತಾಗಿದ್ದಾನೆ. ತಮ್ಮಿಬ್ಬರ ನಡುವೆ ಅಂತಹದ್ದೇನೂ ನಡೆದಿಲ್ಲ, ಸಹಜವಾಗಿ ಗೆಳೆತನದಿಂದ ವರ್ತಿಸಿದ್ದೇನೆ ಎಂದಿರುವ ಸುಶಾಂತ್, ಈ ಕುರಿತು ಇಬ್ಬರ ಮಧ್ಯೆ ನಡೆದಿರುವ ಮೊಬೈಲ್ ಟೆಕ್ಸ್‌ನ ಸ್ಕ್ರೀನ್ ಶಾಟ್‌ಗಳನ್ನೂ ಮಾಧ್ಯಮಗಳಿಗೆ ಬಿಡುಗಡೆ ಮಾಡಿದ್ದಾನೆ.

ಸುಶಾಂತ್ ಒಳ್ಳೆಯ ಮನುಷ್ಯ ಎನ್ನುವುದು ಸಹನಟಿ ಸಾರಾ ಅಲಿ ಖಾನ್ ಅಂಬೋಣ. 'ನನಗೆ ಹಿಂದಿ ಸರಿಯಾಗಿ ಬರುತ್ತಿರಲಿಲ್ಲ. ಸಿನಿಮಾದ ನಟನೆಯ ವೇಳೆ ತುಂಬ ಚೆನ್ನಾಗಿ ಹಿಂದಿ ಹೇಳಿಕೊಟ್ಟರು. ನನಗಂತೂ ಮೊದಲ ಚಿತ್ರವಾದ್ದರಿಂದ ಸಹಜವಾಗಿ ಗಾಬರಿಯೂ ಇತ್ತು. ಆದರೆ ಸುಶಾಂತ್ ಧೈರ್ಯ ತುಂಬಿದರು' ಎಂದಿದ್ದಾಳೆ ಸಾರಾ. 'ಎಂಎಸ್ ಧೋನಿ' ಸಿನಿಮಾದಲ್ಲಿ ಧೋನಿಯ ಪಾತ್ರವನ್ನು ಅತ್ಯುತ್ತಮವಾಗಿ ನಿರ್ವಹಿಸಿ ವಿಮರ್ಶಕರ ಮೆಚ್ಚುಗೆ ಪಡೆದಿರುವ ಸುಶಾಂತ್, ಇನ್ನೂ ಎರಡು ಹೊಸ ಚಿತ್ರಗಳಲ್ಲಿ ನಟಿಸುತ್ತಿದ್ದಾನೆ. ಬಾಲಿವುಡ್‌ನ ಇತರ ನಟರಿಗಿಂತ ಭಿನ್ನವಾಗಿ ಸಮಾಜಸೇವೆಯಲ್ಲೂ ತೊಡಗಿಕೊಂಡಿರುವ ಸುಶಾಂತ್, ಸಂಜನಾಳ ಆರೋಪದ ಬಗ್ಗೆ ಇನ್ನು ಮುಂದೆ ಸ್ಪಷ್ಟೀಕರಣ ನೀಡುವುದಿಲ್ಲ ಎಂದೂ ನಿರ್ಧರಿಸಿದ್ದಾನಂತೆ. ■

# ಅಕ್ಷರಾ ತಲೆನೋವು

ಬಾಲಿವುಡ್ ನಟಿಯರಿಗೆ ತಮ್ಮ ಮೊಬೈಲ್‌ಗಳೇ ಇತ್ತೀಚೆಗೆ ತಲೆನೋವಾಗಿ ಪರಿಣಮಿಸುತ್ತಿವೆ. ಖಾಸಗಿ ಕ್ಷಣದ ಫೋಟೊಗಳನ್ನು ತಮ್ಮ ಮೊಬೈಲ್‌ನಲ್ಲಿ ಸಂಗ್ರಹಿಸುವ ಅಭ್ಯಾಸ ಇರುವ ನಟಿಯರಂತೂ ಇನ್ನಷ್ಟು ಜಾಗರೂಕರಾಗಿರಬೇಕು. ಕಮಲಹಾಸನ್ ಎರಡನೇ ಮಗಳು ಅಕ್ಷರಾ ತನ್ನ ಮೊಬೈಲ್‌ನಲ್ಲಿದ್ದ ಖಾಸಗಿ ಕ್ಷಣದ ಚಿತ್ರಗಳು ಸೋರಿಕೆಯಾಗಿದ್ದರಿಂದ ಸಿಟ್ಟಿಗೆದ್ದಿದ್ದು ಸಹಜವೇ. ಒಳಉಡುಪುಗಳನ್ನು ಧರಿಸಿ ತನ್ನ ಸೆಲ್ಫೀಗಳನ್ನು ಕ್ಲಿಕ್ಕಿಸಿಕೊಂಡಿರುವ ಅಕ್ಷರಾ, ಅದನ್ನು ಐಫೋನ್‌ನಲ್ಲಿ ಸಂಗ್ರಹಿಸಿ ಇಟ್ಟುಕೊಂಡಿದ್ದಳು. ಈ ಚಿತ್ರಗಳು ಹೇಗೆ ಜಾಲತಾಣಗಳಲ್ಲಿ ಸೋರಿಕೆಯಾಗಿವೆ ಎನ್ನುವುದು ಆಕೆಯ ಪ್ರಶ್ನೆಯಾಗಿತ್ತು.

ಟ್ವಿಟರ್ ಮೂಲಕ ಪೊಲೀಸರಿಗೆ ದೂರು ನೀಡಿದ್ದಳು. ಮುಂಬೈಯ ಸೈಬರ್ ಪೊಲೀಸರು ಈ ದೂರಿನ ಬೆನ್ನು ಹತ್ತಿ ಹೋದಾಗ ಹೊಸ ವಿಷಯವೊಂದು ಗೊತ್ತಾಗಿದೆ. ಬಾಲಿವುಡ್‌ನ ಒಂದು ಕಾಲದ ಸೂಪರ್ ಹೀರೊಯಿನ್ ರತಿ ಅಗ್ನಿಹೋತ್ರಿಯ ಮಗ ತನುಜ್ ಮೊಬೈಲ್‌ಗೆ ಈ ಚಿತ್ರಗಳು ಹೋಗಿವೆ ಎನ್ನುವುದೇ ಆ ಹೊಸ ವಿಷಯ.

ಅಕ್ಷರಾ ಈ ಹಿಂದೆ ತನುಜ್ ಜೊತೆಗೆ ಅನ್ಯೋನ್ಯವಾಗಿದ್ದದ್ದು ಎಲ್ಲರಿಗೂ ಗೊತ್ತಿದ್ದ ಸಂಗತಿ. ಆದರೆ ಅವರ 'ಸಂಬಂಧ' ಎರಡು ವರ್ಷಗಳ ಹಿಂದೆಯೇ ಕಡಿದುಬಿದ್ದಿದೆ. ಈಗ ತನುಜ್ ಈ ಫೋಟೊಗಳನ್ನು ಜಾಲತಾಣಗಳಿಗೆ ಲೀಕ್ ಮಾಡಿರಬಹುದೆ ಎನ್ನುವ ಅನುಮಾನ ಪೊಲೀಸರದ್ದು. ಆದರೆ ಅನುಜ್, 'ಈ ಫೋಟೊಗಳು ನನ್ನ ಫೋನ್‌ಗೆ ಬಂದಿದೆ ಎನ್ನುವುದೇ ನನಗೆ ಗೊತ್ತಿರಲಿಲ್ಲ' ಎಂದಿದ್ದಾನೆ.

2015ರಲ್ಲಿ ಅಮಿತಾಭ್ ಬಚ್ಚನ್ ಮತ್ತು ಧನುಷ್ ಜೊತೆಗೆ 'ಶಮಿತಾಭ್' ಚಿತ್ರದಲ್ಲಿ ನಟಿಸಿ ಬಾಲಿವುಡ್ ಗಮನ ಸೆಳೆದ ಅಕ್ಷರಾಗೆ ನಟನೆಗಿಂತ ನಿರ್ದೇಶನದ ಮೇಲೆಯೇ ಹೆಚ್ಚು ಮೋಹವಂತೆ. ಕಳೆದ ವರ್ಷ ತಮಿಳಿನ ಹಿಟ್ ಚಿತ್ರ 'ವಿವೇಗಂ' ನಲ್ಲಿ ನಟಿಸಿ ಗಮನ ಸೆಳೆದಿದ್ದಳು. ಈ ಹಿಂದೆ ಮಣಿರತ್ನಂ ಅವರ 'ಕಾದಲ್' ಚಿತ್ರದಲ್ಲಿ ನಟಿಸಲು ಕರೆ ಬಂದಾಗ ನಿರಾಕರಿಸಿದ್ದು ದೊಡ್ಡ ಸುದ್ದಿಯಾಗಿತ್ತು.



■ ಬಿಂದು